ಟೆಂಡರ್ ಕರೆದೇ ಮಾಡಿದ್ದಾರೆ. ಅವರು ಬಂದಮೇಲೆ ಟೆಂಡರ್ ಇಲ್ಲದೇ ಯಾವುದೇ ಒಂದು ಐಟಂ ಕೂಡ ತೆಗೆದುಕೊಂಡಿಲ್ಲ.

ರಾಜ್ಯಪಾಲರ ಅಡ್ರೆಸ್ ಬಗ್ಗೆ ಉತ್ತರ ಕೊಡುವಾಗ ಇನ್ನು ಹೆಚ್ಚಿನ ವಿವರ ಅದರಲ್ಲಿ ಕೊಡುತ್ತೇನೆ.

ಪೂರಕ ಅಂದಾಜುಗಳ (ಮೊದಲನೆಯ ಕಂತು)

ಅಧ್ಯಕ್ಷರು : ಈಗ ಅನುಪೂರಕ ಅಂದಾಜುಗಳ (ಮೊದಲನೇ ಕಂತು) ಚರ್ಚೆ ಮುಕ್ತಾಯವಾಯಿತು. ಈಗ ಬೇಡಿಕೆಗಳನ್ನು ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ. "31 -3-94 ಕ್ಕೆ ಪೂರ್ಣಗೊಳ್ಳುವ ಅನೂಪೂರಕ ಅನುದಾನ ಸಂಖ್ಯೆ 1 ರಿಂದ 6,8,10,13,15,22,24,25,31,34,35,,4042,43,48,552,53,54,55,58 ಮತ್ತು 60 ಮೊದಲನೇ ಕಂತುಗಳನ್ನು ಸರ್ಕಾರದವರು ಸಭೆಯ ವೆಚ್ಚವನ್ನು ಸಂದಾಯ ಮಾಡುವಂತಾಗಲು ಪೂರಕ ಅನುದಾನ ಪಟ್ಟಿಯಲ್ಲಿ ಸೂಚಿಸಿದ ಮೊಬಲಗನ್ನು ಮೀರದಂತೆ ಇರುವ ಮೊತ್ತವನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

ಪೂರಕ ಅಂದಾಜುಗಳ (ಎರಡನೇ ಕಂತು)

ಅಧ್ಯಕ್ಷರು : ಈಗ ಪೂರಕ ಅಂದಾಜುಗಳ (ಎರಡನೇ ಕಂತು) ಮೇಲಿನ ಚರ್ಚೆ ಮುಕ್ತಾಯವಾಯಿತು. ಈಗ ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ, "31-3-94 ಕ್ಕೆ ಕೊನೆಗೊಳ್ಳುವ ಪೂರಕ ಅನುದಾನ ಸಂಖ್ಯೆ 1,2,3,4,9,10,13,15,19,22,25,28,31,33,34 ,39,40,41,42,47,48,58,59 ಮತ್ತು 60 ಕ್ಕೆ ಸಂಬಂಧಿಸಿದ 2ನೇ ಕಂತುಗಳನ್ನು ಸರ್ಕಾರದವರು ವೆಚ್ಚವನ್ನು ಸಂದಾಯ ಮಾಡುವಂತಾಗಲು ಪೂರಕ ಅನುದಾನ ಪಟ್ಟಿಯಲ್ಲಿ ಸೂಚಿಸಿದ ಮೊಬಲಗನ್ನು ಮೀರದಂತೆ ಇರುವ ಮೊತ್ತವನ್ನು ಮಂಜೂರು ಮಾಡುವುದು".

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನೂ ಈ ಕೆಳಗೆ ನಮೂದಿಸಲಾಗಿದೆ.)

7.20 ಪಿ.ಎಂ.

1994ರ ಕರ್ನಾಟಕ ಧನ ವಿನಿಯೋಗ ವಿಧೇಯಕ

ಶ್ರೀ ಎಂ. ವೀರಪ್ಪಮೊಯ್ಲಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1994ರ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ " 1994ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ. ವೀರಪ್ಪಮೊಯ್ಲಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ 1994ರ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

1994ರ ಕರ್ನಾಟಕ ಧನವಿನಿಯೋಗ ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ.ವೀರಪ್ಪಮೊಯ್ಲಿ (ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ, 1994ರ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು : ಪ್ರಸ್ತಾವನೆ ಏನೆಂದರೆ" 1994ರ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 3ರವರೆಗೆ

ಅಧ್ಯಕ್ಷರು "ಖಂಡ 2 ಮತ್ತು 3ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ಮತ್ತು 3 ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ವೀರಪ್ಪಮೊಯ್ಲಿ ಮುಖ್ಯ ಮಂತ್ರಿಗಳು : ಮಾನ್ಯ ಅಧ್ಯಕ್ಷರೆ, 1994ರ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ : " 1994ರ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು.

(ಸಭೆಯು ರಾತ್ರಿ 7.25 ಗಂಟೆಗೆ ಮುಕ್ತಾಯವಾಗಿ ತಾ: 11-2-94ರ ಗುರುವಾರ ಬೆಳಿಗ್ಗೆ 9.30 ಗಂಟೆಗೆ ಪುನಃ ಸಮಾವೇಶಗೊಳ್ಳಲು ತೀರ್ಮಾನಿಸಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).

ಅನುಬಂಧ-I

ಕರ್ನಾಟಕ ವಿಧಾನಸಭೆ

ಒಂಭತ್ತನೆಯ ವಿಧಾನಸಭೆ

(ಹನ್ನೆರಡನೆಯ ಅಧಿವೇಶನ)

ಕರ್ನಾಟಕ ಧನ ವಿನಿಯೋಗ ವಿಧೇಯಕ 1994

(ವಿಧಾನಸಭೆ ವಿಧೇಯಕ 1994ರ ಸಂಖ್ಯೆ 4)

1993-94ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲವು ಅಧಿಕ ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ವಿಧೇಯಕ.

1993-94ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆ ಪೈಕಿಯಿಂದ ಕೆಲವು ಅಧಿಕ ಮೊತ್ತಗಳ ಸಂದಾಯ ಮತ್ತು ವಿನಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುತ್ತದೆ;

ಇದು ಗಣರಾಜ್ಯದ ನಲವತ್ತಏದನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ :

1. ಸಂಕ್ಷಿಪ್ತ ಹೆಸರು - ಈ ಅಧಿನಿಯಮವನ್ನು ಕರ್ನಾಟಕ ಧನ ವಿನಿಯೋಗ ಅಧಿನಿಯಮ, 1994 ಎಂದು ಕರೆಯತಕ್ಕುದು

2. ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 1993-94ನೇ ಹಣಕಾಸು ವರ್ಷಕ್ಕಾಗಿ 237,94,06,000 ರೂಪಾಯಿಗಳ ನೀಡಿಕೆ - ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಂಧದಲ್ಲಿ, 1993-94ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಸುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿದ್ದ ಮೊತ್ತದಲ್ಲಿ ಇನ್ನೂರ ಮೂವತ್ತೇಳು ಕೋಟಿ ತೊಂಬತ್ತನಾಲ್ಕು ಲಕ್ಷದ ಆರು ಸಾವಿರ ರೂಪಾಯಿಗಳಿಗೆ ಮೀರದಷ್ಟು ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡತಕ್ಕುದು ಮತ್ತು ಉಪಯೋಗಿಸತಕ್ಕದ್ದು.

3. ಧನವಿನಿಯೋಗ – ಈ ಅಧಿನಿಯಮದ ಮೂಲಕ, ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು, ಸದರಿ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕುದು.

ಅನುಸೂಚಿ

(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

ಬೇಡಿಕೆ ಸಂಖ್ಯೆ	ಸೇವೆಗಳು ಮತ್ತು ಉದ್ದೇಶಗಳು		ಮೀರದ ಮೊಬಲಗು		ಒಟ್ಟು
			ವಿಧಾನ ಸಭೆಯಿಂದ ಪುರಸ್ಕೃತವಾದುದನ್ನು	ಸಂಚಿತ ನಿಧಿಯಿಂದ ಪ್ರಭೃತವಾದುದನ್ನು	
1.	ವ್ಯವಸಾಯ (ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ನಿಗಮ ಹೊರತುಪಡಿಸಿ)	ರಾಜಸ್ವ	42,33,33,000	11,20,000	42,44,53,000
		ಬಂಡವಾಳ	3,00,00,000	...	3,00,00,000
		ರಾಜಸ್ವ	...	21,000	21,000
2.	ತೋಟಗಾರಿಕೆ	ಬಂಡವಾಳ	50,00,000	...	50,00,000
		ರಾಜಸ್ವ	1,00,00,000	...	1,00,00,000
3.	ಪಶುಸಂಗೋಪನೆ	ಬಂಡವಾಳ	1,50,00,000	...	1,50,00,000
		ರಾಜಸ್ವ	86,50,000	...	86,50,000
4.	ಮೀನುಗಾರಿಕೆ	ಬಂಡವಾಳ	15,00,000	...	15,00,000
5.	ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು (ಜವಳಿ ಸಕ್ಕರೆ ಮತ್ತು ರೇಷ್ಮೆ ವ್ಯವಸಾಯದ ಹೊರತು)	ಬಂಡವಾಳ	3,54,000	...	3,54,000
8.	ರೇಷ್ಮೆ ವ್ಯವಸಾಯ	ಬಂಡವಾಳ	27,38,000	...	27,38,000
9.	ಜವಳಿ ಉದ್ಯಮಗಳು ಇತ್ಯಾದಿ	ರಾಜಸ್ವ	6,00,000	...	6,00,000
10	ಸಕ್ಕರೆ ಕೈಗಾರಿಕೆಗಳು	ಬಂಡವಾಳ	7,92,42,000	...	7,91,42,000

13	ಉಚ್ಚ ಶಿಕ್ಷಣ	ರಾಜಸ್ವ	5,01,000	...	5,01,000
		ಬಂಡವಾಳ	30,00,000	...	5,02,000
		ರಾಜಸ್ವ	30,00,000	...	30,00,000
15	ಕಲೆ ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ	ರಾಜಸ್ವ	50,00,000	...	50,00,000
19	ವಿಶ್ರಾಂತಿ ವೇತನ ಮತ್ತು ಇತರೆ ನಿವೃತ್ತಿ ಸೌಲಭ್ಯಗಳು	ರಾಜಸ್ವ	9,00,000	...	9,00,000
22	ಇತರೆ ವಿವಿಧ ಸೇವೆಗಳು	ರಾಜಸ್ವ	58,00,000	...	58,00,000
24	ಅರಣ್ಯ	ರಾಜಸ್ವ	7,61,20,000	...	7,61,20,000
25	ರಾಜ್ಯದ ಅಬಕಾರಿ	ರಾಜಸ್ವ	7,00,00,000	...	7,00,00,000
		ಬಂಡವಾಳ	2,00,00,000	...	2,00,00,000
28	ಬಂದೀಖಾನೆಗಳು, ಅಗ್ನಿಶಾಮಕ ಮತ್ತು ಸೈನಿಕರ ಕಲ್ಯಾಣ ಇತ್ಯಾದಿ	ರಾಜಸ್ವ	25,00,000	...	25,00,000
31	ವೈದ್ಯಕೀಯ ಶಿಕ್ಷಣ	ರಾಜಸ್ವ	4,33,99,000	...	4,33,99,000
33	ಗೃಹನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳ ಹೊರತು)	ರಾಜಸ್ವ	1,000	4,21,000	4,22,000
		ಬಂಡವಾಳ	1,000	...	1,000
34	ನಗರಾಭಿವೃದ್ಧಿ	ಬಂಡವಾಳ	4,50,00,000	...	4,50,00,000
35	ಸಣ್ಣ ನೀರಾವರಿ	ಬಂಡವಾಳ	...	13,91,000	13,91,000
39	ಚುನಾವಣೆಗಳು	ರಾಜಸ್ವ	1,83,35,000	...	1,83,35,000
40	ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ	ರಾಜಸ್ವ	75,86,000	...	75,86,000

41	ಸಚಿವಾಲಯ	ರಾಜಸ್ವ	50,00,000	...	50,00,000
42	ಜಿಲ್ಲಾಡಳಿತ	ರಾಜಸ್ವ	37,00,00,000	...	37,00,00,000
43	ಸಾಮಾನ್ಯ ಆಡಳಿತ ಇತ್ಯಾದಿ	ರಾಜಸ್ವ	40,00,000	...	40,00,000
47	ಕಟ್ಟಡಗಳು	ಬಂಡವಾಳ	5,29,00,000	1,56,000	5,30,56,000
48	ರಸ್ತೆಗಳು ಮತ್ತು ಸೇತುವೆಗಳು	ಬಂಡವಾಳ	40,80,00,000	...	40,80,00,000
51	ಭೂ ಕಂದಾಯ ಇತ್ಯಾದಿ	ರಾಜಸ್ವ	...	16,62,000	16,62,000
52	ಮುದ್ರಾಂಕಗಳು ಮತ್ತು ನೋಂದಣಿ	ರಾಜಸ್ವ	2,03,15,000	...	2,03,15,000
53	ಮತೀಯ ಮತ್ತು ಧರ್ಮದಾಯ ಸಂಸ್ಥೆಗಳು ಇತ್ಯಾದಿ	ರಾಜಸ್ವ	10,00,000	...	10,00,000
54	ವಕ್ಫ್	ರಾಜಸ್ವ	40,00,000	...	40,00,000
55	ಸಹಕಾರ	ರಾಜಸ್ವ	14,50,00,000	...	14,50,00,000
58	ಗ್ರಾಮೀಣ ಅಭಿವೃದ್ಧಿ ಮತ್ತು ಉದ್ಯೋಗ	ರಾಜಸ್ವ	5,87,52,000	...	5,87,52,000
59	ಕಾರ್ಮಿಕ ಮತ್ತು ಉದ್ಯೋಗ	ರಾಜಸ್ವ	1,000	...	1,000
60	ಹರಿಜನ, ಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣ	ರಾಜಸ್ವ	42,07,16,000	4,91,000	42,12,07,000
		ಬಂಡವಾಳ	1,00,00,000	...	1,00,00,000
	ಜುಮ್ಲಾ	ರಾಜಸ್ವ	170,15,09,000	37,15,000	170,52,24,000
		ಬಂಡವಾಳ	67,26,35,000	15,47,000	67,41,82,000
	ಒಟ್ಟು ಜುಮ್ಲಾ		237,41,44,000	52,62,000	237,94,06,000

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

1993-94ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅಗತ್ಯವಿರುವ ಮತ್ತಷ್ಟು ಹಣವನ್ನು ರಾಜ್ಯದ ಸಂಚಿತ ನಿಧಿಯೊಳಗಿನಿಂದ ವಿನಿಯೋಗಿಸಲು ಭಾರತ ಸಂವಿಧಾನದ 205 (1)(ಎ) ಅನುಚ್ಛೇದದ ಉಪ-ಬಂಧಗಳನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಎಂ. ವೀರಪ್ಪ ಮೊಯಿಲಿ,
ಮುಖ್ಯಮಂತ್ರಿಗಳು.

ನಿಂ.ಹು. ಮುತ್ತಲಗೇರಿ,
ಕಾರ್ಯದರ್ಶಿ.